**ಸಾಕ್ಷಿಯನ್ನು ದಿನಾಂಕಃ 07-03-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು ಪ್ರತಿವಾದಿ ನಂ. D4(b) and D4(c) ಪರ ವಕೀಲರಿಂದಃ**

ನಾನು ಎಂ ಎ ಡಿಗ್ರಿ ಪಡೆದಿದ್ದೇನೆ. ನನ್ನ ತಾತ ಊರಿನ ಗೌಡರಾಗಿದ್ದರು. ನನ್ನ ತಂದೆಯೂ ಊರಿನ ಗೌಡರಾಗಿದ್ದರು. ನನ್ನ ತಂದೆ ಹಾಗೂ ಅಜ್ಜ ವಿಧ್ಯಾವಂತರಾಗಿದ್ದರು ಎಂದರೆ ಸರಿ. ನಮ್ಮ ಕುಟುಂಬದ ಹಿರಿಯವರು ಅವಿಧ್ಯಾವಂತರು ಎಂದು ನಾನು ಹೇಳಿ ವಾದ ಪತ್ರದಲ್ಲಿ ಬರೆಸಿರುವುದಿಲ್ಲ. 4 ನೇ ಪ್ರತಿವಾದಿ ಹಾಗೂ 4(ಎ) ಪ್ರತಿವಾದಿ ತೀರಿಕೊಂಡಿರುವರು ಎಂದರೆ ಸರಿ. ಪ್ರತಿವಾದಿ ನಂ. 4(ಎ) ಇವರಿಗೆ ಮಕ್ಕಳಿರುವರು ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ಶಿವಪೂಜಿ ಕೊಟ್ರಪ್ಪನ ಮನೆ ಇರುವುದು ಎಂದರೆ ಸರಿ. ಪಶ್ಚಿಮಕ್ಕೆ ಪಾಟೀಲ ಕೊಟ್ರ ಗೌಡರ ಮನೆ ಇದೆ ಎಂದರೆ ಸರಿ. ಉತ್ತರಕ್ಕೆ ಪಾಟೀಲ ಬಸವನಗೌಡರ ಜಾಗವಿದೆ ಎಂದರೆ ಸರಿ. ದಕ್ಷಿಣಕ್ಕೆ ಸರ್ಕಾರಿ ರಸ್ತೆ ಇದೆ ಎಂದರೆ ಸರಿ. ಮೇಲೆ ಹೇಳಿದ ಚೆಕ್ಕುಬಂದಿಗಳ ಮದ್ಯೆ ಇರುವ ಆಸ್ತಿಗೆ ನಾವು ತಕರಾರು ಮಾಡುತ್ತಿದ್ದೇವೆ ಎಂದರೆ ಸರಿ.

ನನ್ನ ಅಜ್ಜ ಮಳ್ಳಪ್ಪನ ವಂಶಸ್ಥರಿಗೆ 48 ಸೆಂಟ್ಸ್ ಪೈಕಿ 24 ಸೆಂಟ್ಸ್ ಅವರ ಜೀವಿತಾವಧಿಯಲ್ಲಿ ಮಾರಾಟ ಮಾಡಿದ್ದರು. ವೈಯಕ್ತಿಕವಾಗಿ ಯಾರಾರಿಗೆ ಎಷ್ಟೆಷ್ಟು ಸೆಂಟ್ಸ್ ಮಾಡಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ಅಜ್ಜ 24 ಸೆಂಟ್ಸ್ ನ್ನು ಮಾರಾಟ ಮಾಡಿದ್ದನು ಎಂದು ನಾನು ವಾದಪತ್ರದಲ್ಲಿ ಯಾವ ಆಧಾರದ ಮೇಲೆ ಬರೆಸಿದ್ದೇವೆ ಎಂದರೆ ನಾನು ಬರೆಸಿರುವುದಿಲ್ಲ, ನನ್ನ ಅಜ್ಜ ಬರೆಸಿರುವರು. ವಾದಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನು ಇನಾಮ್ ಲ್ಯಾಂಡ್ ಎಂದರೆ ಸರಿ. ಅದರಲ್ಲಿ ಮನೆಗಳಿವೆ ಎಂದರೆ ಸರಿ. ಯಾರಾರಿಗೆ ಎಷ್ಟೆಷ್ಟು ಸೆಂಟ್ಸ್ ಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುವರು ಎಂದರೆ 24 ಸೆಂಟ್ಸ್ ನಲ್ಲಿ ಮಳ್ಳಪ್ಪನ ವಂಶಸ್ಥರು ಮನೆಯನ್ನು ಕಟ್ಟಿಕೊಂಡಿರುವರು. ಇನ್ನುಳಿದ 24 ಸೆಂಟ್ಸ್ ಪೈಕಿ 2 ಸೆಂಟ್ಸ್ ನಲ್ಲಿ ಶಿವಪೂಜಿ ಚನ್ನಬಸಪ್ಪನ ಮಕ್ಕಳಾದ ಕೊಟ್ರಪ್ಪರವರು ಮನೆ ಕಟ್ಟಿರುವರು. ಉಳಿದ 2 ಸೆಂಟ್ಸ್ ನಲ್ಲಿ ಶಿವಪೂಜಿ ಶಿವಪ್ಪನ ಮಕ್ಕಳು ಬೇಸ್ಮೆಂಟನ್ನು 1993 ರಲ್ಲಿ ಹಾಕಿರುವರು.

ಅವರು ಹಾಕಿರುವ ಬೇಸ್ಮೆಂಟಿನಲ್ಲಿ ಒಂದು ತಗಡಿನ ಶೆಡ್ಡನ್ನು ಹಾಕಿರುವರು ಎಂದರೆ ಸರಿಯಲ್ಲ. ಅಲ್ಲಿ ಅವರು ವ್ಯವಸಾಯ ಸಾಮಾಗ್ರಿಗಳನ್ನು ಹಾಕಿರುವರು ಎಂದರೆ ಸರಿಯಲ್ಲ. ಇನಾಮ್ ರದ್ದುಗೊಳಿಸಲು ನಾನು ಕಂದಾಯ ಅಧಿಕಾರಿಗಳಿಗೆ ಅರ್ಜಿಯನ್ನು ನೀಡಿರುವುದಿಲ್ಲ. 4 ನೇ ಪ್ರತಿವಾದಿಯ ಮಕ್ಕಳು ಇನಾಮ್ ರದ್ದತಿಗೆ ಅರ್ಜಿ ಕೊಟ್ಟಿರಬಹುದು ಎಂದರೆ ಇರಬಹುದು. ಇನಾಮ್ ರದ್ದುಗೊಂಡ ನಂತರ 4 ಸೆಂಟ್ಸ್

ಅವರ ಹೆಸರಿಗೆ ಆಗಿದೆ ಎಂದರೆ ಸರಿಯಲ್ಲ. ಇನಾಮ್ ರದ್ದುಗೊಂಡಿರುವುದಿಲ್ಲ. 4 ಸೆಂಟ್ಸ್ ಜಮೀನು 4 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಹೆಸರಿಗೆ ದಿಃ 08.01.1991 ರಂದು ಖಾತಾ ಬದಲಾವಣೆಯಾಗಿರುತ್ತದೆ ಮತ್ತು ಡಿಸಿಬಿ ರಿಜಿಸ್ಟರಿನಲ್ಲಿ ಅವರ ಹೆಸರು ದಾಖಲಾಗಿರುತ್ತದೆ ಹಾಗೂ ಅವರಿಗೆ 6 ಎ ಎಂದು ಪಂಚಾಯತ್‌ನಿಂದ ಡೋರ್ ನಂಬರ್ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. 1996-97 ರಲ್ಲಿ ಮನೆ ಕಟ್ಟಲು ಪರವಾನಿಗೆ ನೀಡಿರುವರು ಎಂದರೆ ಅವರ ವಿಸ್ತೀರ್ಣಕ್ಕೆ ನೀಡಿರಬಹುದು, ನಮ್ಮ ವಿಸ್ತೀರ್ಣದಲ್ಲಿ ನೀಡಿರುವುದಿಲ್ಲ.

4 ನೇ ಪ್ರತಿವಾದಿ ತಮ್ಮ ಜಾಗದಲ್ಲಿ ಪೂರ್ವಕ್ಕೆ ಜಾಗವನ್ನು ಬಿಟ್ಟುಕೊಂಡು ಪಶ್ಚಿಮ ಕಡೆಗೆ ಶೆಡ್ಡನ್ನು ಹಾಕಿಕೊಂಡಿರುವರು ಎಂದರೆ ಸರಿಯಲ್ಲ. ಈಗಲೂ ಅಲ್ಲಿ 4 ನೇ ಪ್ರತಿವಾದಿಯ ತಗಡಿನ ಶೆಡ್ ಇರುವುದು ಎಂದರೆ ಸರಿಯಲ್ಲ. ನಾನು ಶೆಡ್ಡನ್ನು ಹಾಕಿರುವ ವಿಚಾರವನ್ನು ವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ಆ ವಿಚಾರವನ್ನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ 4 ನೇ ಪ್ರತಿವಾದಿ ಕಂದಾಯ ಪಾವತಿ ಮಾಡುತ್ತಿರುವರು ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ರೀ ಸೆಟಲ್ಮೆಂಟ್ ದಾಖಲೆ ಹಾಗೂ ಮೈಸೂರು ರಿವಿಷನ್ ಸೆಟಲ್ಮೆಂಟ್ ದಾಖಲೆ ಲಭ್ಯವಿರುವುದು ಎಂದರೆ ಇರಬಹುದು ನನಗೆ ಮಾಹಿತಿ ಇಲ್ಲ. ಅವುಗಳನ್ನು ಪಡೆದುಕೊಳ್ಳಲು ನಾನು ಪ್ರಯತ್ನ ಪಟ್ಟಿರುವುದಿಲ್ಲ. 4 ನೇ ಪ್ರತಿವಾದಿ ಸದರಿ ದಾಖಲೆಯನ್ನು ಪಡೆಯಲು ಅರ್ಜಿಯನ್ನು ಕೊಟ್ಟಾಗ ದಾಖಲೆಗಳು ಲಭ್ಯವಿಲ್ಲವೆಂದು ಹಿಂಬರಹವನ್ನು ಸಕ್ಷಮ ಪ್ರಾಧಿಕಾರಿಯವರು ನೀಡಿರುವರು ಎಂದರೆ ಇರಬಹುದು.

1968 ನೇ ಸಾಲಿನಿಂದಲೂ 4 ನೇ ಪ್ರತಿವಾದಿಯ ಹೆಸರಿನಲ್ಲಿ 4 ಸಂಟ್ಸ್ ನ ಖಾತೆ ಇರುವುದು ಎಂದರೆ ಸರಿಯಲ್ಲ. ನಾನು ಮೊದಲಿನಿಂದಲೂ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ದಾವಾ ಹಾಕುವ ಕಾಲಕ್ಕೆ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. 4 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ಕಂದಾಯ ದಾಖಲೆಗಳನ್ನು ಮತ್ತು ಮ್ಯುಟೇಶನ್ ಆದೇಶಗಳನ್ನು ನಾನು ಕಂದಾಯ ಇಲಾಖೆಯಲ್ಲಿ ಪ್ರಶ್ನಿಸಿರುವುದಿಲ್ಲ. ದಾವಾ ಆಸ್ತಿಯು ವ್ಯವಸಾಯದ ಜಮೀನಾಗಿರುವುದಿಲ್ಲ ಎಂದರೆ ಸರಿ. 2013 ರಲ್ಲಿ ಸಾಗುವಳಿ ಮಾಡಲು ಹೋಗಿದ್ದೆನು ಎಂದು ನಾನು ವಾದಪತ್ರದಲ್ಲಿ ಬರೆಸಿರುವುದಿಲ್ಲ. ದಾವಾ ಆಸ್ತಿಯ ಮೇಲಿನ ನನ್ನ ಮಾಲೀಕತ್ವವನ್ನು ತೋರಿಸುವ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಮತ್ತು ನಾನು ಸ್ವಾಧೀನ ಅನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

O.S. 148/2013
P.W.1

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

07-03-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**